# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,

# ಆಳಂದ

## ಸಿ.ಸಿ. ನಂ. 355/2015

ಪಿರ್ಯಾದಿ ಕರ್ನಾಟಕ ಸರ್ಕಾರದ ಪರ

ಪಿ.ಎಸ್.ಐ .ನಿಂಬರ್ಗಾ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರು

1. ರಸೂಲಸಾಬ ತಂದೆ ಫಕೀರಸಾಬ ನದಾಫ

ವಯಸ್ಸುಃ 53 ವರ್ಷ, ಸಾಃ ಮಾಡಿಯಾಳ

2. ಫಕೀರಸಾಬ ತಂದೆ ರಸೂಲಸಾಬ ನದಾಫ್

ವಯಸ್ಸುಃ 22 ವರ್ಷ, ಸಾಃ ಮಾಡಿಯಾಳ

3. ಗುಲಶನಬಿ ಗಂಡ ರಸೂಲಸಾಬ ನದಾಫ್

ವಯಸ್ಸುಃ48 ವರ್ಷ, ಸಾಃ ಮಾಡಿಯಾಳ,

4. ಹಮೀದ ತಂದೆ ರಸೂಲಸಾಬ ನದಾಫ್

ವಯಸ್ಸುಃ20 ವರ್ಷ, ಸಾಃ ಮಾಡಿಯಾಳ,

### ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಗಳ ಹೇಳಿಕೆ

**ಪ್ರಶ್ನೆ 1** ನ್ಯಾಯಾಲಯದ ಮುಂದೆ ಅಭಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ 1 ರಿಂದ 4 ನೇ ಆರೋಪಿತರು. ಕೇಳಿರುತ್ತೇವೆ.

**ಪ್ರಶ್ನೆ 2.** ಸಿ.ಡಬ್ಲೂ. 6. ಪಿ.ಡಬ್ಲೂ. 2 ಡಾಃ ಅನೀತಾ ಜಾಧವ್ ಗಂಡ ಜಾಲಪ್ಪಾ ಜಾಧವ್ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿಃ 21-02-2015 ರಂದು ಚಾಸಾ-1 ರವರನ್ನು ಹಲ್ಲೆಯ ಮೇರೆಗೆ ನಿಂಬರ್ಗಾ ಪಿ.ಸಿ 851 ಪೋಲಿಸರು ನನ್ನ ಮುಂದೆ ಹಾಜರುಪಡಿದ ಮೇರೆಗೆ ನಾನು ಅವರನ್ನು ಪರೀಕ್ಷಿಸಿ ನೋಡಿದಾಗ ಅವರಿಗೆ ಬಲಭಾಗದ ಕುತ್ತಿಗೆಯ ಮಧ್ಯಭಾಗದಲ್ಲಿ ತೆರಿಚಿದ ಗಾಯ ಒಂದು ಸೆ.ಮೀ ನಷ್ಟು ಇದ್ದು, ಕೆಂಪಗೆ ಆಗಿತ್ತು. ಬಲಭಾಗದ ಕಣ್ಣಿನ ಕೆಳಗೆ ಬಾವು 0.2*0.2 ಇದ್ದು ಕೆಂಪಗೆ ಇದ್ದು, ಬಲಭಾಗದ ಬುಜಕ್ಕೆ ಒಳಪೆಟ್ಟು ಆಗಿದ್ದು 2*5 ಸೆ.ಮೀ ಇದ್ದು, ಕೆಂಪಾಗಿ ಇತ್ತು. ನನ್ನ ಪ್ರಕಾರ ಸದರಿ 2ಮತ್ತು 3 ಗಾಯಗಳು ಸಾದಾ ಗಾಯಗಳು ಆಗಿದ್ದು, ಅವುಗಳು ಚೂಪಾದ ಮತ್ತು ಮೊಂಡಾದ ವಸ್ತುಗಳಿಂದ ಆಗಿರಬಹುದು. 1 ನೇ ಗಾಯವು ಗಟ್ಟಿಯಾದ ಮತ್ತು ಚೂಪಾದ ವಸ್ತು ಮತ್ತು ಮೊಂಡಾದ ವಸ್ತುಗಳಿಂದ ಆಗಿರಬಹುದು ಎಂದು ಸಾಕ್ಷ ನುಡಿದಿರುತ್ತಾರೆ, ನೀವೇನು ಹೇಳುತ್ತೀರಿ?

ಉತ್ತರಃ 1 ರಿಂದ 4 ನೇ ಆರೋಪಿತರು. ಸುಳ್ಳು

**ಪ್ರಶ್ನೇ 3** ಃ ಸಿ.ಡಬ್ಲೂ.1. ಪಿ. ಡಬ್ಲೂ. 4, ಖಾಸಾಸಾಬ ತಂದೆ ಫಕೀರ ಸಾಬ ಅವರು ತಮ್ಮ ನುಡಿ ಸಾಕ್ಷಿಯಲ್ಲಿ 1ನೇ ಆರೋಪಿ ನನ್ನ ತಮ್ಮ 3ನೇ ಆರೋಪಿ 1 ನೇ ಆರೋಪಿಯ ಹೆಂಡತಿ 2 ಮತ್ತು 4 ಆರೋಪಿತರು 1 ಮತ್ತು 3 ನೇ ಆರೋಪಿತರ ಮಕ್ಕಳು. ಚಾಸ-2 ರಿಂದ 5 ಪರಿಚಯ ಇರುತ್ತದೆ. 2015 ನೇ ಇಸವಿಯಲ್ಲಿ ಸಾಯಂಕಾಲ 05.00 ಗಂಟೆ ಸುಮಾರಿಗೆ ನಾನು ತೋಟಕ್ಕೆ ಹೋಗುವಾಗ 1 ಮತ್ತು 3ನೇ ಆರೋಪಿತರು ನನ್ನ ಜೋತೆ ಜಗಳ ತೆಗೆದಿರುತ್ತಾರೆ. ನಾನು ಯಾಕೆ ಜಗಳ ಮಾಡುತ್ತಿರಾ ಎಂದು ಕೇಳಿದಾಗ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ 1ನೇ ಆರೋಪಿಯು ನನಗೆ ಕೈಯಿಂದ ಹೊಡಿದಿರುತ್ತಾನೆ. ನಂತರ 2ನೇ ಆರೋಪಿಯು ಬಡಿಗೆಯಿಂದ ಬೆನ್ನ ಮೇಲೆ ಹೊಡೆದಿರುತ್ತಾರೆ. 4ನೇ ಆರೋಪಿಯು 2 ಕಲ್ಲುಗಳಿಂದ ಹೊಡೆದಿರುತ್ತಾರೆ. 3ನೇ ಆರೋಪಿಯು ಅವಾಚ್ಯ ಶಬ್ದಗಳಿಂದ ಬೈದು ಅವನನ್ನು ಬಿಡಬೇಡಿರಿ ಎಂದು ಪ್ರಚೋದನೆ ಮಾಡಿರುತ್ತಾರೆ. ಆಗ ಚಾಸ-4 ಮತ್ತು 5ರವರ ಸದರಿ ರಸ್ತೆ ಮೇಲೆ ಹೋಗುತ್ತಿದ್ದಾಗ ಜಗಳವನ್ನು ನೋಡಿ ಬಿಡಿಸಿರುತ್ತಾರೆ. ನಂತರ ಆರೋಪಿತರು ಜೀವ ಬೇದರಿಕೆ ಹಾಕಿರುತ್ತಾರೆ. ನಂತರ ನಮ್ಮ ಮನೆಗೆ ಹೋಗಿ ಮರುದಿನ ಪೋಲಿಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ ಅಂತಾ ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 4 ನೇ ಆರೋಪಿತರು. ಸುಳ್ಳು

**ಪ್ರಶ್ನೆ 4-** ಸಿ.ಡಬ್ಲೂ.7, ಪಿ. ಡಬ್ಲೂ. 6 ಸಂತೋಷ ತಂದೆ ಶಂಕರ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ದಿಃ 21-02-2015 ಮ.1.00 ಗಂಟೆಗೆ ಚಾಸ-1 ರವರು ಠಾಣೆಗೆ ಹಾಜರಾಗಿ ನೀಡಿದ ಹೇಳಿಕೆಯ ದೂರಿನ ಸಾರಾಂಶದ ಮೇರೆಗೆ ಠಾಣಾ ಗುನ್ಹಾ ಸಂಖ್ಯೆ 21/2015 ಅಂತಾ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡು ದಿಃ 22-02-2015 ರಂದು ಚಾಸಾ 2 ಮತ್ತು 3 ರವರ ಸಮಕ್ಷಮ ಗುನ್ನ ಸ್ಥಳದ ಪಂಚನಾಮೆಯನ್ನು ಬೆ.11.00 ರಿಂದ 12.00 ಗಂಟೆಯವರೆಗೆ ಜರುಗಿಸಿ ಸ್ಥಳದಿಂದ ಒಂಸಂತೋಷದು ಬಡಿಗೆಯನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ಅದೇ ಚಾಸಾ 4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 28-03-2015 ರಂದು ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಹಾಜರಾದ ಮೇರೆಗೆ ಸೂಕ್ತ ಜಾಮೀನನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 29-03-2015 ರಂದು ಚಾಸಾ 1 ರವರ ಗಾಯಯ ಪ್ರಮಾಣ ಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು, ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 4 ನೇ ಆರೋಪಿತರು. ಸುಳ್ಳು

ಪ್ರಶ್ನೆ 5- ನೀವು ಏನನ್ನಾದರೂ ಹೇಳ ಬಯಸುವೀರಾ?

ಉತ್ತರಃ 1 ರಿಂದ 4 ನೇ ಆರೋಪಿತರು. ಏನು ಇಲ್ಲಾ

ಪ್ರಶ್ನೆ 6- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ 1 ರಿಂದ 4 ನೇ ಆರೋಪಿತರು. ಇಲ್ಲಾ

(ಮೇಲೆ ಹೇಳಲಾದ ಪ್ರಶ್ನೆಗಳನ್ನು ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ನ್ಯಾಯಾಲಯ.